ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:04-07-2022ರಂದು ಸಿ.ವಿ.ರಾಮನ್‌ನಗರ ಉಪ ವಿಭಾಗ,

ವಾರ್ಡ್ ಸಂಖ್ಯೆ:50, ಬೆನ್ನಿಗಾನಹಳ್ಳಿ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:04-07-2022ರಂದು ಬೆಳಗ್ಗೆ 11.30 ಗಂಟೆಗೆ ವಾರ್ಡ್-50ಬೆನ್ನಿಗಾನಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಶ್ರೀ ರಾಮಾಂಜನೇಯ. ಕಾರ್ಯಪಾಲಕ ಅಭಿಯಂತರರು(ವಿದ್ಯುತ್ ದಕ್ಷಿಣ) ಹಾಗೂ ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ50. ಬೆನ್ನಿಗಾನಹಳ್ಳಿ ವಾರ್ಡ್ ಕಛೇರಿ, 2ನೇ ಮುಖ್ಯರಸ್ತೆ, ಕಸ್ತೂರಿನಗರ ಬೆಂಗಳೂರು 560043 ಇಲ್ಲಿಹಮ್ಮಿಕೊಳ್ಳಲಾಯಿತು. ಸದರಿ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ

1. ಶ್ರೀ.ರಮೇಶ್.ಎನ್ ಸದಸ್ಯರು
2. ಶ್ರೀ.ನಂಜೇಗೌಡ ಸದಸ್ಯರು
3. ಶ್ರೀ.ನಂದಗೋಪಾಲ್ ಸದಸ್ಯರು
4. ಶ್ರೀ.ವಿ.ಎಂ.ರಾಜಣ್ಣ ಸದಸ್ಯರು
5. ಶ್ರೀ.ರಮಾನಥ್ ರಾವ್ ಆರ್.ಡಬ್ಲ್ಯೂ.ಎ
6. ಶ್ರೀ.ವೆಂಕಟೇಶ್ ಸದಸ್ಯರು

ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು

1. ಶ್ರೀ.ರಾಮಾಂಜನೇಯ. ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ಹಾಗೂ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ:50, ಬೆನ್ನಿಗಾನಹಳ್ಳಿ
2. ಶ್ರೀ.ನರಸಿಂಹಯ್ಯ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:50, ಬೆನ್ನಿಗಾನಹಳ್ಳಿ
3. ಡಾ॥ಅಶೋಕ್, ಹಳೇ ಬೈಯ್ಯಪ್ಪನಹಳ್ಳಿ ವೈದ್ಯರು
4. ಶ್ರೀ.ಪ್ರಭುದಾಸ್ ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ.ಅಜಿತ್ ಹಿರಿಯ ಆರೋಗ್ಯ ಪರಿವೀಕ್ಷಕರು

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ವಿವಿಧ ಇಲಾಖೆಯ ಅಧಿಕಾರಿ/ನೌಕರರುಗಳಿಗೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು.ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಮಂಡಿಸಲು ಮಾನ್ಯ ಅಧ್ಯಕ್ಷರು ತಿಳಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯಲ್ಲಿ ಚರ್ಚಿಸಿದ ವಿಷಯಗಳು:-

| ಕ್ರ.ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | ಘನತ್ಯಾಜ್ಯ ನಿರ್ವಹಣೆ (SWM)/ಆರೋಗ್ಯ ಇಲಾಖೆ(Heath Department) | |
| 1 | ಹೊರ ವರ್ತುಲ ರಸ್ತೆಯ ಜಂಕ್ಷನ್ ಮತ್ತು 3ನೇ ಅಡ್ಡರಸ್ತೆ, ಕಸ್ತೂರಿನಗರದಲ್ಲಿ ಕಸ ಸಂಗ್ರಹಣೆ ಸ್ಥಳದಲ್ಲಿ ಇರುವ ಡಸ್ಟ್ ಬಿನ್‌ಗಳ ಸ್ಥಳವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಕೋರಲಾಯಿತು. | Junior/Senior Health Inspector |
| | ಕಾಮಗಾರಿ ಇಲಾಖೆ (Engineering) | |
| 1 | • ಶ್ರೀ.ನಂಜೇಗೌಡ ರವರು ಮಾತನಾಡಿ ರಾಕೇಶ್ ಫ್ಯಾಂಟಸಿ ಅಪಾರ್ಟ್‌ಮೆಂಟ್ ರವರು ಬೃಹತ್ ನೀರುಗಾಲುವೆಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ದೂರು ನೀಡಿರುತ್ತಾರೆ.<br>• ಚನ್ನಸಂದ್ರದಲ್ಲಿ ಶ್ಮಶಾಣಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸಲು, ಹಾಗೂ ಶೆಲ್ಟರ್‌ನ್ನು ನಿರ್ಮಿಸಲು ಕೋರಿರುತ್ತಾರೆ.<br>• ಚನ್ನಸಂದ್ರದಲ್ಲಿ ಶ್ಮಶಾಣದಲ್ಲಿರುವ ಬೋರ್‌ವೆಲ್‌ನ್ನು ದುರಸ್ಥಿ ಮಾಡಲು | Assistant Engineer-BBMP |

| | | |
|---|---|---|
| | ಕೋರಿರುತ್ತಾರೆ.<br>• ಬಿ.ಚನ್ನಸಂದ್ರ ವ್ಯಾಪ್ತಿಯಲ್ಲಿ ಕಾಂಕ್ರೀಟ್ ರಸ್ತೆಯನ್ನು ಮಾಡದೇ ಆಸ್ಫಾಲ್ಟ್ ರಸ್ತೆ ಮಾಡಲು ಕೋರಿದರು.<br>• ಚನ್ನಸಂದ್ರ ಗ್ರಾಮಕ್ಕೆ ಹೊಂದಿಕೊಂಡು ಬಿ.ಡಿ.ಎ ಬಡಾವಣೆಯಲ್ಲಿ ಚರಂಡಿಗಳಲ್ಲಿ ಹೂಳನ್ನು ತೆರಗೆಯಲು ಕೋರಿದರು.<br>• ಸರ್ವೀಸ್ ರಸ್ತೆ, ಕಸ್ತೂರಿನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ತಿಳಿಸಿದರು.<br>• ಕಸ್ತೂರಿನಗರ 2ನೇ ಮುಖ್ಯರಸ್ತೆಯಲ್ಲಿ ಅರ್ಧಕ್ಕೆ ನಿಂತಿರುವ ಡಾಂಬರೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದರು.<br>• ವಾರ್ಡಿನಲ್ಲಿರುವ ಸ್ಮಶಾನವನ್ನು ಅಭಿವೃದ್ಧಿಪಡಿಸಲು ತಿಳಿಸಿದರು.<br>• ಶ್ರೀ.ಮುಕುಂದ್ ರವರು ಕೃಷ್ಣಯ್ಯನಪಾಳ್ಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ತಿಳಿಸಿದರು. ಸಹಾಯಕ ಅಭಿಯಂತರರು ಮಾತನಾರಿ ರಸ್ತೆ ಗುಂಡಿಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. | |
| | **ರಸ್ತೆಮೂಲಭೂತ ಸೌಕರ್ಯ (Major roads)** | |
| 1 | 5ನೇ ಮುಖ್ಯರಸ್ತೆ, ಕಸ್ತೂರಿನಗರದಲ್ಲಿರುವ ಬಸ್ ತಂಗುದಾಣದ ಶೆಲ್ಟರ್‌ನ್ನು ದುರಸ್ಥಿಗೊಳಸಲು ಕೋರಿದರು. ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿರುತ್ತದೆ. | Assistant Engineer-Major roads |
| | **ಬೆಂಗಳೂರು ಜಲ ಮಂಡಳ(BWSSB)** | |
| 1 | • ಶ್ರೀ.ನಂಜೇಗೌಡ ರವರು ಮಾತನಾಡಿ ಬಿ.ಚನ್ನಸಂದ್ರ, 1ನೇ ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯೂಎಸ್‌ಎಸ್‌ಬಿ ಪೈಪ್‌ಗಳು ದುರಸ್ಥಿ ಮಾಡಲು ಕೋರಿದರು.<br>• ಪಿಲ್ಲಾರೆಡ್ಡಿನಗರದಲ್ಲಿ ಸ್ಯಾನಿಟರಿ ಪೈಪ್ಸ್‌ಗಳನ್ನು ಪೈಪ್‌ಗಳು ದುರಸ್ಥಿ ಮಾಡಲು ಕೋರಿದರು. | Assistant Engineer-BWSSB |
| 2 | • ಚನ್ನಸಂದ್ರದಲ್ಲಿ ಸ್ಯಾನಿಟರಿ ಪೈಪ್ಸ್‌ಗಳನ್ನು ದುರಸ್ಥಿ ಮಾಡಲು ಕೋರಿದರು. | Assistant Engineer-BWSSB |
| | **Animal Husbandary** | |
| 1 | ನಂ.124/ಇ, 2ನೇ ಮುಖ್ಯರಸ್ತೆ, ಕಸ್ತೂರಿನಗರ ಇಲ್ಲಿ ಟ್ರಸ್ಟ್ ಆಕ್ವಾಟಿಕ್ ಅರೇಂಜರ್ಸ್ ಎಂದು ಮೀನಿನ ಅಂಗಡಿ ಇಟ್ಟಿದ್ದು, ಇವರು ಸ್ವತೆಯನ್ನು ಕಾಪಾಡದೇ ಇರುವುದರಿಂದ ದುರ್ವಾಸನೆ ಬರುತ್ತಿರುತ್ತದೆ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರು ಕ್ರಮ ವಹಿಸಲು ಕೋರಿರುತ್ತಾರೆ. ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿರುತ್ತದೆ. | Animal Husbandary |
| | **ಬೀದಿ ದೀಪಗಳು(STREET LIGHTS)** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಭೆಯಲ್ಲಿ ದೂರು ನೀಡಲಾಯಿತು. ಇದಕ್ಕೆ ಗುತ್ತಿಗೆದಾರರ ಪರವಾಗಿ ಶ್ರೀ.ಸಂತೋಷ್‌ರವರು ದುರಸ್ಥಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸಲಾಗುವುದ ಎಂದು ತಿಳಿಸಿದರು. | ಸಹಾಯಕ ಅಭಿಯಂತರರು ಬೆಸ್ಕಾಂ |
| | **ತೋಟಗಾರಿಕಾ ಇಲಾಖೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಪರಿಸರ ಸಂರಕ್ಷಣೆ ಮಾಡಲು ಗಿಡಗಳನ್ನು ನಡೆಲು ಕೋರಿದರು. | ತೋಟಗಾರಿಕಾ ಅಧೀಕ್ಷಕರು |
| | **ಅರಣ್ಯ ಇಲಾಖೆ** | |
| 1 | ಸದಾನಂದನಗರ 2ನೇ ಅಡ್ಡರಸ್ತೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಒಣಗಿರುವ ಹಾಗೂ ಬೀಳುವ ಹಂತದಲ್ಲಿರುವ ಮರಗಳನ್ನು ತೆರವುಗೊಳಸಲು ಶ್ರೀ.ರಾಜಣ್ಣ ಸದಸ್ಯರು ಕೋರಿದರು.<br>ಅದರಂತೆ ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗಿರುತ್ತದೆ. | ವಲಯ ಅರಣ್ಯ ಅಧಿಕಾರಿಗಳು |

| | | |
|---|---|---|
| 1 | **ಬೃಹತ್ ನೀರುಗಾಲುವೆ(SWD Dept)**<br>• ಕೃಷ್ಣಯ್ಯನಪಾಳ್ಯದಲ್ಲಿ ಮಳೆ ನೀರು ಸರಾಗವಾಗಿ ಹೋಗದೆ ರಸ್ತೆಯ ಮೇಲೆ ನಿಲ್ಲುತ್ತಿರುವುದರಿಂದ ಬೃಹತ್ ನೀರುಗಾಲುವೆಯ ಹೂಳು ತೆಗೆದು ಮತ್ತು ರೈಲ್ವೇ ಸೇತುವೆ ಕೆಳಭಾಗದ ಹೂಳು ತೆಗೆದು ನೀರು ಸರಾಗವಾಗಿ ಹೋಗುವಂತೆ ಕ್ರಮ ವಹಿಸಬೇಕೆಂದು ಸ್ಥಳೀಯ ಸದಸ್ಯರು ಕೋರಿದರು.<br>• ಅದರಂತೆ ಬೃಹತ್ ನೀರುಗಾಲುವೆ ವಿಭಾಗದವರಿಗೆ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿರುತ್ತದೆ. | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ |
| 1 | **ಸಂಚಾರ ಪೊಲೀಸ್ ಇಲಾಖೆTRAFIC POLICE DEPARTMENT**<br>• ಕಸ್ತೂರಿನಗರ 2ನೇ 'ಎ' ಮುಖ್ಯರಸ್ತೆ, ನ್ಯೂ ಹರೈಸನ್ ಕಾಲೇಜು ಮತ್ತು ಓ.ಎಂ.ಬಿ.ಆರ್ ಲೇಔಟ್‌ನಲ್ಲಿರುವ ಸಿ.ಎಂ.ಆರ್ ಕಾಲೇಜು ಬಳಿ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸುತ್ತಿರುವುದನ್ನು ತಡೆಗಟ್ಟಲು ಹಾಗೂ ಸಂಚಾರ ದಟ್ಟಣೆಯನ್ನು ತಡೆಗಟ್ಟಲು ಸೂಚಿಸಲಾಯಿತು. | |
| 1 | **ಪೊಲೀಸ್ ಇಲಾಖೆ(ಕಾ ಮತ್ತು ಸು)**<br>ವಾರ್ಡ್ ವ್ಯಾಪ್ತಿಯಲ್ಲಿ ಕಾಲೇಜುಗಳ ಸುತ್ತ-ಮುತ್ತ ಗಸ್ತು ನಡೆಸಲು ಕ್ರಮ ವಹಿಸಲು ಕೋರಿರುತ್ತಾರೆ. | Police Departmrnt |
| 1 | **ಪೊಲೀಸ್ ಇಲಾಖೆ(ಟ್ರಾಫಿಕ್)**<br>ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ-ಕಾಲೇಜುಗಳ ಸುತ್ತ-ಮುತ್ತ ವಾಹನ ನಿಲುಗಡೆಯನ್ನು ನಿಲ್ಲಿಸದಂತೆ ನಿಯಂತ್ರಿಸಲು ಕೋರಿದರು. | Police Departmrnt |

ಪ್ರಸ್ತುತ ಸಭೆಗೆ ಗೈರು ಹಾಜರಾಗಿರುವವರ ವಿರುದ್ಧ ನೋಟೀಸು ಜಾರಿ ಮಾಡಿ. ಮುಂದಿನಸಭೆಗೆ ಕಡ್ಡಾಯವಾಗಿ ನಿಗಧಿತ ಸಮಯದೊಳಗೆ ಹಾಜರಿರಲು ಹಾಗೂ ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ. ವಾರ್ಡ್ ಸಮಿತಿ ಕಾರ್ಯದರ್ಶಿರವರಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿ ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳುಅಧ್ಯಕ್ಷರು

ಶ್ರೀ.ನರಸಿಂಹಯ್ಯ.ಎಚ್
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:50 ಬೆನ್ನಿಗಾನಹಳ್ಳಿ
ಮತ್ತು ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:50 ಬೆನ್ನಿಗಾನಹಳ್ಳಿ

ಶ್ರೀ.ರಾಮಾಂಜನೇಯ.
ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ)

ಪ್ರತಿಯನ್ನು:-

1. ಶ್ರೀ.ರಾಮಾಂಜನೇಯ. ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ)ಹಾಗೂ ನೋಡೆಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ:50 ರವರ ಮಾಹಿತಿಗಾಗಿ ಕಳುಹಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
3. ಮಾನ್ಯ ತಹಶೀಲ್ದಾರ್, ಕೆ.ಆರ್.ಪುರಂ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
4. ಅಧೀಕ್ಷಕರು, ತೋಟಗಾರಿಕೆ ಇಲಾಖೆ(ಪೂರ್ವ) ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
5. ಆರೋಗ್ಯ ವೈದ್ಯಾಧಿಕಾರಿಗಳು(ಸಿ.ವಿ.ರಾಮನ್‌ನಗರ) ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.